# ಮನೆಗೆಲಸ ಬೇಡ ಆಲಸ್ಯ!



**ಮನೆಯನ್ನು ಸ್ವಚ್ಛವಾಗಿ ಸುಂದರವಾಗಿ ಇಡುವುದು, ಅಡುಗೆ ಮಾಡುವುದು, ಚಿಕ್ಕ ಮಕ್ಕಳ ಲಾಲನೆ ಪಾಲನೆ, ಹಿರಿಯರ ಬಗ್ಗೆ ಕಾಳಜಿ ವಹಿಸುವುದು ಕುಟುಂಬದ ಆಯವ್ಯಯ ನಿರ್ವಹಣೆ ಇತ್ಯಾದಿ ಕೆಲಸ ನಾವೇ ಮಾಡಿಕೊಂಡರೆ ಸಂಸಾರ ಆನಂದ ಸಾಗರ..!**

■ **ನಾಗೇಶ ಯು. ಸಿದ್ದೇಶ್ವರ**

ಅರವತ್ತು ತುಂಬಿತ್ತು. ಅಂದು ನಾನು ವೃತ್ತಿಯಿಂದ ನಿವೃತ್ತಿಯಾದ ದಿನ. ಬೀಳ್ಕೊಡುವ ಸಮಾರಂಭ ಜೋರಾಗಿತ್ತು. ಭಾಷಣಗಳ ಸುರಿಮಳೆ, ಹೊಗಳಿಕೆಯ ಮಾತುಗಳು. ಕರತಾಡನಗಳ ಮಧ್ಯೆ ಒಂದು ಪುಟ್ಟ ಉಡುಗೊರೆಯನ್ನಿತ್ತು ಸಹೋದ್ಯೋಗಿಗಳು ಬೀಳ್ಕೊಟ್ಟರು. ಆ ಸಂಸ್ಥೆಯಲ್ಲಿ 3 ದಶಕಗಳ ಸುದೀರ್ಘ ಆಡಳಿತ, ಮಾರ್ಕೆಟಿಂಗ್, ತರಬೇತಿ, ಮೀಟಿಂಗು ಮತ್ತು ಟಾರ್ಗೆಟ್‌ಗಳೇ ನನ್ನ ಜಗತ್ತಾಗಿತ್ತು.  ಇದರ ಆಚೆಗೆ ನನ್ನದೇ ಆದ ಕುಟುಂಬ ಪುಟ್ಟ ಜಗತ್ತಿದೆ. ಅಲ್ಲಿಯೂ ಸವಾಲುಗಳಿವೆ ಎಂದು ಅರಿವಾಗಲು ನಿವೃತ್ತಿಯೇ ಬರಬೇಕಾಯ್ತು.

ಅಂದು ಮನೆ ತಲುಪಿದಾಗ ಮಡದಿ ಮನೆಗೆಲಸ ಮುಗಿಸಿ ಸುಸ್ತಾಗಿ ಉಸ್ಸೆಂದು ದಣಿವಾರಿಸುತ್ತ ಕುಳಿತಿದ್ದಳು. ಸಭೆಯಲ್ಲಿ  ಕೊಟ್ಟ ಉಡುಗೊರೆಯನ್ನು ಅವಳ ಕೈಗಿತ್ತು ಸಮಾರಂಭದ ವಿವರ ಹೆಮ್ಮೆಯಿಂದ ಹೇಳಿದೆ. ಎಂದಿನಂತೆ ಕಾಫಿ ಮಾಡಿ ನನ್ನ ಕೈಗಿರಿಸಿದಳು ನನ್ನವಳು. ಉಡುಗೊರೆಯನ್ನು ಪ್ರೀತಿಯಿಂದ ನೇವರಿಸಿ ಹೇಳಿದಳು. ‘ತುಂಬಾ ಚೆನ್ನಾಗಿದೆ ನೋಡಿ, ನಿಮಗೆ ನಿವೃತ್ತಿ ಇದೆ. ನನಗೆ ಮಾತ್ರ ನಿವೃತ್ತಿಯೂ ಇಲ್ಲ. ಬೀಳ್ಕೊಡುವ ಸಮಾರಂಭವೂ ಇಲ್ಲ. ನನ್ನ ಮನೆಗೆಲಸ ನಿರಂತರ.’

ನಮ್ಮ ದಾಂಪತ್ಯ ಪ್ರಾರಂಭವಾಗಿ ಮೂರು ದಶಕಗಳೇ ದಾಟಿವೆ. ಯಾಕೋ ಇಂದಿನ ಅವರ ಉದ್ಗಾರ ಮಾತ್ರ ನನ್ನ ಮನದಾಳದಲ್ಲಿ ಇಳಿದು ಕಲಕಿತು. ಆ ಮಾತಿನಲ್ಲಿರುವ ನೋವಿನ ಎಳೆಯನ್ನು ಹಿಡಿದು ನಾನು ಕೇಳಿಯೇ ಬಿಟ್ಟೆ. ‘ಅಲ್ಲಾ ಮಾರಾಯ್ತಿ ಇನ್ನಂತೂ ನನ್ನ ವೃತ್ತಿ ಮುಗಿಯಿತು. ನನಗೇನು ಆಗಬೇಕೋ ಕೇಳು ನಾನು ನಿನ್ನ ಜೊತೆಗಿದ್ದೇನೆ’ ಅಂತೂ ಶುರುವಾಯ್ತು ನೋಡಿ. ಚಹಾ ಕಾಫಿ ಮಾಡುವುದು, ತರಕಾರಿ ಹೆಚ್ಚುವುದು, ಅಡುಗೆ ಮಾಡುವುದು ಕಸ ಗುಡಿಸುವುದು ಮತ್ತು ಮೊಮ್ಮಗಳನ್ನು ಎತ್ತಿ ಆಡಿಸಿ, ಊಟ ಮಾಡಿಸುವುದು ಇತ್ಯಾದಿ. ತಾಳ್ಮೆಯ ವಿಷಯವಾಗಿ ಉದ್ದಾಮ ಭಾಷಣ ತರಬೇತಿ ನೀಡಿದ ನನಗೆ ಅದೇನೆಂದು ಸರಿಯಾಗಿ ಅರ್ಥವಾಗತೊಡಗಿತು.

ನನ್ನ ನೆನಪು ಮೂರು ದಶಕಗಳ ಹಿಂದೆ ಚಲಿಸಿತು. ನನ್ನವಳು ನನ್ನ ಜೀವನವನ್ನು ಪ್ರವೇಶಿಸಿದಾಗ ಶಾಲೆಯಲ್ಲಿ ಶಿಕ್ಷಕನಾಗಿದ್ದ ನನಗೆ ಒಂದು ದೊಡ್ಡ ರಾಷ್ಟ್ರೀಯ ಆರ್ಥಿಕ ಸಂಸ್ಥೆಯಲ್ಲಿ ನೌಕರಿ ದೊರಕಿತು. ಆನಂತರ ನಾನು ತಿರುಗಿ ನೋಡಲೇ ಇಲ್ಲ. ಅನೇಕ ಪ್ರಮೋಷನ್‌ಗಳು, ಟ್ರಾನ್ಸ್‌ಫರ್‌ಗಳು, ತತ್ಸಮಾನವಾದ ತರಬೇತಿ, ಮೀಟಿಂಗ್‌ಗಳು ಮತ್ತು ಜವಾಬ್ದಾರಿಗಳು ಹೆಚ್ಚುತ್ತಾ ಹೋದವು. ಈ ಕಾರ್ಯಬಾಹುಳ್ಯದ ಮಧ್ಯೆ ನಾನು ಮನೆ, ಮಡದಿ ಮತ್ತು ಇಬ್ಬರು ಹೆಣ್ಣು ಮಕ್ಕಳ ಜೊತೆ  ಅರ್ಥಪೂರ್ಣ ಸಮಯ ಕಳೆದಿದ್ದೇ ಕಡಿಮೆ.

ಮನೆಗೆಲಸ ಎಂದರೆ ನಾವಿರುವ ಮನೆಗೆ ಸಂಬಂಧಿಸಿದ ಎಲ್ಲಾ ಕೆಲಸಗಳು. ಮನೆಯನ್ನು ಸ್ವಚ್ಛವಾಗಿ ಸುಂದರವಾಗಿ ಇಡುವುದು, ಅಡುಗೆ ಮಾಡುವುದು, ಚಿಕ್ಕ ಮಕ್ಕಳ ಲಾಲನೆ, ಪಾಲನೆ, ಹಿರಿಯರ ಬಗ್ಗೆ ಕಾಳಜಿ ವಹಿಸುವುದು. ಬಟ್ಟೆ ಬರೆಗಳನ್ನು, ಪಾತ್ರೆಗಳನ್ನು ತೊಳೆಯುವುದು ಕುಟುಂಬದ ಆಯವ್ಯಯಗಳು ಮತ್ತು ಸಮಯದ ನಿರ್ವಹಣೆ ಇತ್ಯಾದಿ. ಗ್ರಾಮೀಣ ಪ್ರದೇಶದಲ್ಲಂತೂ ಮನೆಗೆಲಸದ ಪ್ರಮಾಣ ಇನ್ನೂ ಹೆಚ್ಚು ದನ, ಕರುಗಳನ್ನು ಸಾಕಿದ್ದರೆ ಸಗಣಿ ತೆಗೆಯುವುದು ಹಾಲು ಕರೆಯುವುದು ಮತ್ತು ಮೇವು ತಂದು ತಿನ್ನಿಸುವುದು, ಹೆಚ್ಚಿನ ಕೆಲಸ ರೈತ ಮಹಿಳೆಯರಂತೂ ಬೆಳಗಿನಿಂದ ಸಂಜೆಯವರೆಗೆ ಮನೆಯಲ್ಲಿ ಮತ್ತು ಹೊಲದಲ್ಲಿ ಎರಡು ಕಡೆ ದುಡಿಯುತ್ತಾರೆ. ಗ್ರಾಮೀಣ ಪ್ರದೇಶದ ಜನರು ಪಡುವ ಶ್ರಮ ಶಹರಗಳಲ್ಲಿಯ ಜನರಿಗಿಂತ ಹೆಚ್ಚು ಎಂದೇ ಹೇಳಬೇಕು. ಆದರೆ ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದ ಕುಟುಂಬಗಳಲ್ಲಿ ಪರಸ್ಪರ ಸಹಕಾರ ಭಾವ ಇನ್ನೂ ಜೀವಂತ ಇದೆ ಎಂದು ಹೇಳಬಹುದು.

ಮನೆಗೆಲಸವನ್ನು ಯಾರು ಮಾಡಬೇಕು ಎಂಬ ಪ್ರಶ್ನೆಯ ಬಗ್ಗೆ ವಿಚಾರ ವಿನಿಮಯ ತುಂಬಾ ಕಡಿಮೆ ಅನಾದಿ ಕಾಲದಿಂದಲೂ ನಮ್ಮ ಸಂಸ್ಕೃತಿಯಲ್ಲಿ ಮನೆಯೊಡತಿ ಮೌನವಾಗಿ ಕೆಲಸ ಮಾಡುತ್ತಾ ಬಂದಿದ್ದಾರೆ. ಹಣ ಇದ್ದವರು